ಹೇಳಬೇಕು...' ಅಜ್ಜಿ ಮೇಲೆದ್ದರು.

ನಾನು ನಿಧಾನವಾಗಿ ಹಾಲಿಗೆ ಹಿಂತಿರುಗಿದೆ. ಫೋನಿನ ಪಕ್ಕ ಕುಳಿತು ನಂಬರ್‌ಗಳ ಪುಸ್ತಕ ಕೈಗೆ ತೆಗೆದುಕೊಂಡೆ. ಈಗ ಮತ್ತೊಮ್ಮೆ ಪ್ರೀತಿಗೆ ಫೋನ್ ಮಾಡಬೇಕು.. ಬೆಳಗ್ಗೆ ಬೆಂಗಳೂರಿಗೆ ಹೊರಟು ಹೋದರೆ.... ಅವಳು ಯೂರೋಪ್‌ಗೆ ಹೋದರೆ ಏನಂತೆ... ಅವಳ ಮನೆಯಲ್ಲಿ ಇರಬಹುದು.. ಪೇಪರಿನಲ್ಲಿ ವಾಟೆಂಡ್ ಕಾಲಂ ನೋಡಿ ಕೆಲಸಕ್ಕೆ ಅರ್ಜಿ ಸಲ್ಲಿಸಬಹುದು... ಕೆಲಸಕ್ಕೆ ಸೇರಲು ಇರುವ ಅರ್ಹತೆ ಪಿ.ಯು.! ಪಿ.ಯು ಮಾರ್ಕ್ಸ್ ಸರ್ಟಿಫಿಕೇಟ್ ಎಲ್ಲಾ ಅಮ್ಮನ ಮನೆಯಲ್ಲೇ.. ಇದೆ... ಬೇರೆ!.... ನಾಗೇಂದ್ರನಿಗೆ ಅದನ್ನು ಪೋಸ್ಟ್ ಮಾಡಲು ಹೇಳಬೇಕು... ಅವನು ಕೇಳುವ ನೂರೆಂಟು ಪ್ರಶ್ನೆಗಳಿಗೆ.. ಉತ್ತರಿಸುವುದು ಹೇಗೆ?... ಕೆಲಸಕ್ಕೆ ಸೇರುತ್ತೇನೆ. ಇವರನ್ನು ಬಿಡುತ್ತೇನೆ...ಎಂದು ಈಗಲೇ ಹೇಗೆ ಹೇಳುವುದು?...

ಅಮ್ಮನ ಮನೆಯಲ್ಲೇ ಬಿಟ್ಟು ಬಂದಿರುವುದು ನಿಜ... ನನ್ನ ಬೀರುವಿನಲ್ಲಿಯೇ ಇರಬೇಕು... ಅಥವಾ... ಇವಳು ಹೇಗಿದ್ದರೂ ಬರುವುದಿಲ್ಲ ಎಂದು ಬೀರು ಎಲ್ಲಾ ಖಾಲಿ ಮಾಡಿ... ಒಳಗಿರುವುದನ್ನೆಲ್ಲಾ ಎಸೆದು... ಮನೆಯ ಸೊಸೆಗೆ, ಈ ಕನ್ನಡಿ ಬೀರು ಚೆನ್ನಾಗಿದೆ.... ಅವಳಿಗೇನು... ಬೇಕಾದಷ್ಟಿದೆ.. ಇದನ್ನು ನೀನು ಇಟ್ಕೋ ಎಂದು ಕೊಟ್ಟಿದ್ದರೂ ಕೊಟ್ಟಿರುತ್ತಾರೆ ಅಮ್ಮ.

ಅಮ್ಮನ ಮದುವೆಯಲ್ಲಿ ಅಜ್ಜಿ ಅಮ್ಮನಿಗೆ ಕೊಟ್ಟಿದ್ದ ಮುತ್ತು ಕೆಂಪಿನ ಜುಮುಕಿ.. ಓಲೆ... ಎಷ್ಟು ಚೆಂದವಿತ್ತು... ಅಮ್ಮ ಹಾಕಿದ್ದೇ ನೋಡಿಲ್ಲ ನಾನು.. ಹಬ್ಬ, ಯಾರದ್ದಾದರೂ ಮದುವೆ... ಮುಂಜಿಗೆಲ್ಲಾ.. ಅದನ್ನು ಹಾಕಿಕೊಂಡಿದ್ದು ನಾನು... ನನಗೆ ಅದು ತುಂಬಾ ಕಾಣುತ್ತೆ.. ಎಂದು ಅಮ್ಮ ಕೂಡ ಹಲವು ಬಾರಿ ದೃಷ್ಟಿ ತೆಗೆದಿದ್ದಳು... 'ಅಮ್ಮ... ನಾನು ಮದುವೆ ಮಾಡಿಕೊಂಡು ಹೊರಟಾಗ ನಂಗೆ ನೀನು ಇದನ್ನು ನಂಗೇ ಕೊಟ್ಟುಬಿಡಬೇಕು.. ಎಂದು ನಾನು ಎಂಟು ವರ್ಷದ ಹುಡುಗಿ ಇದ್ದಾಗ ಹೇಳಿದ್ದೆ ಎಂದು ಎಷ್ಟೋ ವರ್ಷಗಳು ಅಪ್ಪ ಹಾಸ್ಯ ಮಾಡುತ್ತಿದ್ದರು....! ನೋ ಜೋಕ್ಸ್ ಅಪ್ಪಾ... ನಂಗೆ ಈ ಓಲೆ.. ಜುಮುಕಿ ಬೇಕು... ನಂಗೆ ತುಂಬಾ ಇಷ್ಟ..' ಎಂದು ಕಾಲೇಜು ಓದುತ್ತಿದ್ದಾಗ ಕೂಡ ಹೇಳಿದ್ದಿದೆ!....

ವರಪೂಜೆಯ ದಿನ ಹಾಕಿಕೊಂಡಿದ್ದೇ ಕೊನೆ... ಆಮೇಲೆ ಅದು ಅಮ್ಮನ ಒಡವೆಯ ಡಬ್ಬಿ ಸೇರಿತು.

ಮೊದಲನೇ ವರ್ಷದ ಗೌರಿಯ ಹಬ್ಬಕ್ಕೆ ಅರಿಶಿನ ಕುಂಕುಮ ತೆಗೆದುಕೊಂಡು ಬರಲು ಅಮ್ಮನ ಮನೆಗೆ ಹೋದಾಗ ಅಪ್ಪ ಅಮ್ಮನಿಗೆ ಹೇಳಿದ್ದರು. 'ಆ ಮುತ್ತಿನ ಜುಮುಕಿ ಇವಳಿಗೆ ಕೊಡ್ತಿಯೇನೋ ನೋಡು..... ಮೊದಲನೇ ವರ್ಷ, ಪೂಜೆ ಇಲ್ಲಿಯೇ ಮಾಡ್ತಾಳೆ ಅಂದುಕೊಂಡಿದ್ದೆ... ಆದ್ರೆ ಬೀಗಿತ್ತಿ ಸೊಸೆ ಕೈಲಿ ಅವರ ಮನೆಯಲೇ ಪೂಜೆ ಮಾಡಿಸ್ತಾರಂತೆ..... ಅವರು ಹಾಗೆ ಹೇಳಿದ ಮೇಲೆ ನಾನೇನು ಹೇಳಕ್ಕೆ ಆಗುತ್ತೆ...' ಅತ್ತೆಯ ಮುಂದೆ ಅಪ್ಪನ ದನಿಯೇ ಏಳುವುದಿಲ್ಲ.

'ಹೂಂ... ಧಾರೆ ಎರೆದುಕೊಟ್ಟ ಮೇಲೆ ಅವರ ಮನೆಗೆ ಸೇರಿದವಳು... ಅವರಿಷ್ಟ.. ಮೂವತ್ತೆರಡು ಜೊತೆ ಮರದ ಬಾಗಿನ ಸಿದ್ಧ ಮಾಡಿಸಿದ್ದಾರಂತೆ.... ಕಾರು ಕಳಿಸ್ತೇನೆ.. ಬಂದು ಬಾಗಿನ ತೆಗೆದುಕೊಂಡು ಹೋಗಿ ಎಂದು ಆಗಲೇ ಫೋನ್ ಮಾಡಿದ್ದರು ಅಳಿಯಂದಿರ ಅಜ್ಜಿ.. ಅವರು ವಜ್ರ ರೂಬಿಯ ಓಲೆ, ಜುಮುಕಿ, ನೆಕ್ಲೆಸ್, ಬಳೆಯ ಸೆಟ್ ಮಾಡಿಸಿದ್ದಾರಂತೆ ಇವಳಿಗೆ ಗೌರಿ ಹಬ್ಬಕ್ಕೆ!... ನನ್ನ ಹಳೆಯ ಮುತ್ತಿನ ಜುಮುಕಿ ಯಾವ ಲೆಕ್ಕ ನಿಮ್ಮ ಮಗಳಿಗೆ... ನಾಗೇಂದ್ರನ ಹೆಂಡತಿಯಾಗಿ ಬರುವವಳಿಗೆ ಆಗುತ್ತೆ... ಬಿಡಿ...'

ಭಾರದ ವಜ್ರ, ರೂಬಿ, ಮುತ್ತು ಎಲ್ಲಾ ಕೂಡಿದ್ದ ಅತ್ತೆ ಕೊಡಿಸಿದ ಜುಮುಕಿಗಿಂಥ ನಾನು ನಾನು ಚಿಕ್ಕ ಹುಡುಗಿಯಾಗಿದ್ದಾಗಿನಿಂದ ಹಾಕಿಕೊಳ್ಳುತ್ತಿದ್ದ ಅಮ್ಮನ ಮುತ್ತಿನ ಜುಮುಕಿಯ ಮೇಲೆ ನನಗೆ ಮೋಹವಿತ್ತು..... ಆದರೆ ಅಮ್ಮ ನನಗೆ ಅದನ್ನು ಕೊಡಲಿಲ್ಲ... ಅವಳು ಇನ್ನೂ ಕಂಡೇ ಇರದ ಸೊಸೆಗಾಗಿ ಎತ್ತಿಟ್ಟು ಜೋಪಾನ ಮಾಡಿದ್ದಳು....

ಅಬ್ಬ... ಹುಚ್ಚು ನೆನಪೇ...ಯಾವುದರಿಂದ ಯಾವುದು ಟ್ರಿಗರ್ ಆಗುತ್ತದೋ... ಎಲ್ಲಿಂದ ಎಲ್ಲಿಗೋ ಅಲೆಯುತ್ತಾ ಹೋಗಿ ಬಿಡುತ್ತದೆ ಈ ಮನಸ್ಸು...

'ಅತ್ತೆ... ಮುಖ್ಯಮಂತ್ರಿಗಳೇ ಬರ್ತಿದ್ದಾರಲ್ಲ.. ನಾಡಿದ್ದು ಹೋಮಕ್ಕೆ... ಛತ್ರವೂ ನಮ್ಮದೇ ಅಲ್ಲವೇ... ಅಲ್ಲಿ ಮಾಡಿಸಲೇ?' ಅತ್ತೆ ಅವರ ಅತ್ತೆಯನ್ನು ಕೇಳುತ್ತಿದ್ದರು.

'ಬೇಡ... ಮನೆಯಲ್ಲಿ ಮಾಡಿದರೆ ಶ್ರೇಷ್ಠ... ನಮ್ಮನೆ ಹಾಲಿಗಿಂತಾನಾ?.. ನಾಲ್ಕು ಸಂಸಾರ ಎರಡೆರಡು ಕೋಣೆಯ ಮನೆ ಕಟ್ಟಿಕೊಂಡು ಸಂಸಾರ ನಡೆಸಬಹುದು.. ಅಷ್ಟು ವಿಶಾಲವಾಗಿದೆ... ಊಟಕ್ಕೆ ಹೊರಗೆ ಶಾಮಿಯಾನ ಹಾಕಿಸು... ತೋಟದ ಮನೆಯಿಂದಲೋ ಛತ್ರದಿಂದಲೋ, ಕಾಲೇಜಿನಿಂದಲೋ ಆಳುಗಳನ್ನು ಕಳಿಸಲು ಹೇಳು, ನಿನ್ನ ಗಂಡನಿಗೆ. ಶಾಸ್ತ್ರಿಗಳಿಗೆ ಹೇಳು... ನಾಳೆಯೇ ಅವರ ಹೆಂಡತೀನ ಕಳಿಸೋಕ್ಕೆ.. ಆಕೆ, ರಾಜಮ್ಮ ಸೇರಿ ಎಲ್ಲಾ ಅಣಿ ಮಾಡ್ತಾರೆ... ನಿನ್ನ ಬೀಗರಿಗೆ ಒಂದು ಫೋನ್ ಮಾಡು.. ಅವರ ಮಗಳು ಸೇರಿರೋ ಮನೆಯ ವೈಭೋಗ ನೋಡಲಿ...'

ಈ ವಯಸ್ಸಿಗೂ ಇಷ್ಟು ಅಹಂಕಾರವೇ ಅಜ್ಜಿಗೆ....!

'ಫೋನ್ ಬಳಿಯೇ ಕೂತಿದ್ಯಲ್ಲ... ನಿಮ್ಮಮ್ಮನ ಮನೆಗೆ ಮಾಡಿಕೊಡು... ನಾನೇ ಮಾತಾಡ್ತೀನಿ... ನಾನೇ ಕರೆದ್ರೆ... ದೊಡ್ಡವರು ಕರೆದ್ರು ಅಂತ ಸಂತೋಷಪಡ್ತಾರೆ. ನಿನ್ನ ಅಪ್ಪ ಅಮ್ಮ...'

ಪ್ರೀತಿಗೆ ಫೋನ್ ಮಾಡುವ ಉದ್ದೇಶದಿಂದಲೇ ಫೋನ್ ಪಕ್ಕ ಕುಳಿತದ್ದು... ಕುಳಿತಾದ ಮೇಲೆ ಹೊಳೆದಿದ್ದು ಅವಳ ಫೋನ್ ನಂಬರ್ ಇಲ್ಲ.. ಎಂದು.. ತಿರುಗಿ ವಿಶ್ವಾಸನನ್ನು ಕೇಳಬೇಕು. ಅವನ ಮುಂದೆ ಈಗ ತಿರುಗಿ ಹೋಗಲಾರೆ.. ನನ್ನ ಕಂಬನಿ ನೋಡಿದ್ದಾನೆ... ದನಿ ಕೇಳಿದಾನೆ... ಏನು ಸಮಾಚಾರ ಎಂದು ಕೇಳಿದರೆ..

'ಅದೇನು.. ಆಕಾಶ ತಲೆ ಮೇಲೆ ಬಿದ್ದವಳ ಹಾಗೆ ಕೂತಿದ್ಯ?.. ಹೇಳಿದ್ದು ಕೇಳಲಿಲ್ಲವೇ?... ಮಾಡು ಅಂತ ಹೇಳಿದ್ದು ಮಾಡಲ್ಲ... ಮೊದಲೇ ಸರಿ.. ಇವತ್ತು ಬೆಳಗಿನಿಂದಂತೂ ಅದೇನೋ... ಗರ ಬಡಿದವಳ ಹಾಗೆ ಇದ್ಯ... ನಾನು, ಅತ್ತೆ ಪಡ್ತಾ ಇರೋ ಸಡಗರ ಸಂಭ್ರಮದಲ್ಲಿ ಒಂದತ್ತು ಭಾಗದಷ್ಟಾದರೂ ಸಂಭ್ರಮ ಬೇಡವೇ?... ನಾಳೆ ವಿವೇಕ್ ಮಂತ್ರಿ ಆದ್ರೆ ಮಂತ್ರಿಗಳ ಹೆಂಡತಿ ಎಂಬ ಹೆಗ್ಗಳಿಕೆ ನಿನಗೇ...'

'ನಂಗೆ ಬೇಡ ಆ ಹೆಗ್ಗಳಿಕೆ!... ಅತ್ತೆ ನಾನು ಅವತ್ತೇ ಹೇಳಿಯೂ ಇದ್ದೆ.. ಇವರು ರಾಜಕೀಯಕ್ಕೆ ಇಳಿಯುವುದು ಇಷ್ಟವಿಲ್ಲ ನನಗೆ...'

'ನಂಗೆ ನೀನು ಸ್ತ್ರೀಶಕ್ತಿ ಅಂತ ಕೂಲಿ ಹೆಂಗಸರ ಜೊತೆ ಬೆರೆಯೋದು ಇಷ್ಟವಿಲ್ಲ... ಹಾಗಂಥ ಏನು ಮಾಡೋಕ್ಕೆ ಆಗುತ್ತೆ?... ಮನೆ ಗಂಡಸರು.. ಅವರಿಗೆ ಸರಿ ತೋರಿದ್ದು ಮಾಡ್ತಾರೆ.. ಕಟ್ಟಿಕೊಂಡ ಹೆಂಡತೀನ ಎಲ್ಲಾ ವಿಷಯಕ್ಕೂ ಕೇಳೋಕ್ಕೆ ಆಗುತ್ತಾ?.. ಬೆಂಬಲವಾಗಿ ನಿಲ್ಲಬೇಕು ಅಷ್ಟೇ. ರಾಜಕೀಯ, ಹಣಕಾಸಿನ ವಿಚಾರ ನಿಂಗೇನು ಗೊತ್ತಾಗುತ್ತೆ?.. ನಿನಗೆ ನಿನ್ನ ಮಕ್ಕಳಿಗೆ ಯಾವುದಕ್ಕೂ ಕಮ್ಮಿ ಮಾಡಿಲ್ಲವಲ್ಲ ನನ್ನ ಮಗ...'

'ಕಮ್ಮಿ ಹೆಚ್ಚು ಅನ್ನೊ ಪ್ರಶ್ನೆ ಅಲ್ಲ ಅತ್ತೆ, ಬೇಕು. ಬೇಡದ ಪ್ರಶ್ನೆ... ಯಾರೋ ಬೀದೀಲಿ ಹೋಗ್ತಾ ಇರೋರಿಗೆ ಮಾಡ್ತಿಲ್ಲ ನಿಮ್ಮ ಮಗ... ಅವರ ಮಕ್ಕಳಿಗೇ ಮಾಡ್ತಾ ಇರೋದು... ನಾನು ನಾಡಿದ್ದು ಇರೋದೇ ಇಲ್ಲ.. ಅದೆಷ್ಟು ಸಡಗರ, ಸಂಭ್ರಮಪಡ್ತಿರೋ ಪಡಿ.'

ಮೆಲ್ಲನೆ ಹೇಳಿ.. ಅವರು ಮತ್ತೇನಾದರೂ ಹೇಳುವ ಮುನ್ನ ಹೊರಗೆ ನಡೆದೆ.

'ಸಿಂಹಾಸನದ ಮೇಲೆ ಕೂರಿಸಿ ಪೂಜಿಸಿದರೂ ನಿನ್ನ ಹಣೆಬರಹ ಇಷ್ಟೇ... ತೃಪ್ತಿ ಪಡುವುದು.. ಕೇಳಿಕೊಂಡು ಬಂದಿರಬೇಕು... ಬೇರೆ ಯಾವುದೇ ಹೆಣ್ಣು ನಿನ್ನ ಸ್ಥಾನದಲ್ಲಿ ಇದ್ದಿದ್ದರೆ ಎಷ್ಟು ಹೆಮ್ಮೆ ಪಡುತ್ತಿದ್ದಳೋ ಏನೋ...'

ಅತ್ತೆಯ ಮಾತುಗಳು ನನ್ನ ಹಿಂದೆಯೇ ತೂರಿಬಂತು.

ಕಾರಿನಿಂದ ಇಳಿದು ಮಾವ ಒಳಗೆ ಬಂದರು. ನನ್ನತ್ತ ತಿರುಗಿಯೂ ನೋಡಲಿಲ್ಲ. ಅದು ಮಾಮೂಲೇ...

'ಏನು ನಿಂದು?.. ಇಲ್ಲಿ ಯಾರಿಲ್ಲ.. ಯಾರನ್ನು ಬೈಯ್ತಾ ಇದ್ಯ..?' ಪ್ರಶ್ನಿಸುತ್ತಲೇ ಒಳನಡೆದರು.

ನಾನು ಪೋರ್ಟಿಕೋದಲ್ಲಿ ಇದ್ದ ಕುರ್ಚಿಯ ಮೇಲೆ ಕುಳಿತೆ.

'ನಾನು ಗೊಣಗೋದು, ಬೈಯ್ಯೋದು ಕೇಳಿಸುತ್ತಲ್ಲಾ.... ಅವಳು ನಿಮ್ಮ ಮುಂದೆಯೇ ಹಾದು ಹೋದಳಲ್ಲಾ..... ಅದು ಕಾಣಿಸಲಿಲ್ಲವೇ?' ಅಂದರು ಅತ್ತೆ...

'ಬಿಡು... ಅವಳು ಬದಲಾಗೋಲ್ಲ.. ನೀನು ಗೊಣಗೋದು ಬಿಡಲ್ಲ... '

'ವಿವೇಕ ಫೋನ್ ಮಾಡಿದ್ದ– ನೀವು ಈಗ ಮಾಡಿ ಸರಿಯಾಗಿ ವಿಷಯ ತಿಳಿದುಕೊಳ್ಳಿ... ನಾಡಿದ್ದು ಹೋಮಕ್ಕೆ ಮುಖ್ಯಮಂತ್ರಿಗಳು ಬರ್ತಾರಂತೆ... ಆ